ಸಾಕ್ಷಿಯನ್ನು ಪ್ರಮಾಣಿಕರಿಸಿದ ದಿನಾಂಕಃ 25.07.2025

ಮುಂದುವರೆದ ಪಾಟೀಸವಾಲು ಪ್ರತಿವಾದಿಯರ ಪರ ಶ್ರೀ ಪಿ ಹೆಚ್ ಎ ವಕೀಲರಿಂದಃ

ನನ್ನ ಮತ್ತು ನಮ್ಮ ಚಿಕ್ಕಪ್ಪ ಶರಣಪ್ಪರವರ ನಡುವೆ ಸಂಬಂದ ಚೆನ್ನಾಗಿ ಇರುತ್ತದೆ. ದಾವಾ ಸ್ವತ್ತಿನ ಕುರಿತು ನನ್ನ ಚಿಕ್ಕಪ್ಪ ಸದರಿ ಸ್ವತ್ತನ್ನು ಅವರ ಹೆಸರಿಗೆ ಮಂಜೂರು ಮಾಡುವಂತೆ ಕೋರಿ ಭೂ ನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಅರ್ಜಿಯ ಮೇರೆಗೆ ಭೂ ನ್ಯಾಯಾ ಮಂಡಳಿಯವರು ಸದರಿ ಅರ್ಜಿಯನ್ನು ವಜಾ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರದ ಬಗ್ಗ ನನಗೆ ಸಂಪೂರ್ಣ ಮಾಹಿತಿ ಇದ್ದರು ಕೂಡಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆದೇಶ ವಿರುದ್ದ ನನ್ನ ಚಿಕ್ಕಪ್ಪ ಎ ಸಿ ನ್ಯಾಯಾಲಯದಲ್ಲಿ ಅಫೀಲು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಅಫೀಲನ್ನು ವಜಾ ಮಾಡಿ ಆದೇಶಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರದ ಬಗ್ಗ ನನಗೆ ಸಂಪೂರ್ಣ ಮಾಹಿತಿ ಇದ್ದರು ಕೂಡಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ

ಸದರಿ ಆದೇಶ ವಿರುದ್ದ ನನ್ನ ಚಿಕ್ಕಪ್ಪ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಅಫೀಲು ಸಂ. 2544/2006 ರಂತೆ ಅಫೀಲು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಅಫೀಲನ್ನು ಮಾನ್ಯ ಉಚ್ಚ ನ್ಯಾಯಾಲಯವು ವಜಾ ಮಾಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆದೇಶದ ವಿರುದ್ದ ನನ್ನಚಿಕ್ಕಪ್ಪ 2013 ರಲ್ಲಿ ದ್ವಿ ಸದಸ್ಯದ ಪೀಠದ ಮುಂದೆ ಮರು ಪರೀಶಿಲನಾ ಅರ್ಜಿ ಸಂ. 31199/2013 ರಂತೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮರು ಪರೀಶಿಲನಾ ಅರ್ಜಿಯನ್ನು ಮಾನ್ಯ ಉಚ್ಚ ನ್ಯಾಯಾಲಯವು ವಜಾ ಮಾಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ಚಿಕ್ಕಪ್ಪನು ಇದೇ ನ್ಯಾಯಾಲಯದಲ್ಲಿ 2014 ರಲ್ಲಿ ದಾವಾ ಸ್ವತ್ತಿನ ಮೇಲೆ ಘೋಷಣಾತ್ಮಕ ಆದೇಶ ಕೋರಿ ದಾವೆ ಸಂ. 517/2014 ಮತ್ತು ಹೊಸ ದಾವೆ ಸಂ. 322/2015 ರಂತೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯನ್ನು ನ್ಯಾಯಾಲಯವು 2018 ರಲ್ಲಿ ವಜಾ ಮಾಡಿದೆ ಎಂದರೆ ನನಗೆ ಗೊತ್ತಿಲ್ಲ. ಮೇಲ್ಕಂಡ ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರು ಕೂಡಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತನ್ನು ನಮ್ಮ ಚಿಕ್ಕಪ್ಪ ಪಾಲು ವಿಭಾಗ ಆದ ನಂತರ ಮೂರು ವರ್ಷದವರೆಗೆ ಸಾಗುವಳಿ ಮಾಡಿದ್ದು ಆ ನಂತರ ನಾವು ಮಾಡುತ್ತಿದ್ದೇವೆ. ನನ್ನ ಚಿಕ್ಕಪ್ಪ ಪ್ರತಿವಾದಿಗಳ ತಂದೆ ಕರಿಬಸಪ್ಪ ವಿರುದ್ದ ಸಲ್ಲಿಸಿದ ದಾವೆಯಲ್ಲಿನಮ್ಮನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯ ಬಗ್ಗೆ ನಮ್ಮ ಚಿಕ್ಕಪ್ಪ ನಮಗೆ ಏನು ಹೇಳಿರುವುದಿಲ್ಲ. ದಾವಾ ಸ್ವತ್ತನ್ನು ನನ್ನ ಚಿಕ್ಕಪ್ಪ ಸಾಗುವಳಿ ಮಾಡುತ್ತಿದ್ದು ನಂತರ ನಾವು ಸಾಗುವಳಿ ಮಾಡುತ್ತಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಚಿಕ್ಕಪ್ಪ ಸಲ್ಲಿಸಿದ ದಾವೆಯು ವಜಾ ಆಗುತ್ತದೆಎಂದು ತಿಳಿದು ನಮ್ಮಿಂದ ಈ ದಾವೆಯನ್ನು ಹಾಕಿಸಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಚಿಕಪ್ಪ ಶರಣಪ್ಪನ ಮಾತುಕೇಳಿ ಪ್ರತಿವಾದಿಗಳಿಗೆ ತೊಂದರೆ ಕೊಡೂವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. 1 ನೇ ವಾದಿಯನ್ನು ಗವಿಸಿದ್ದಪ್ಪ ಯಾನೆ ಅರುಣಕುಮಾರ ಎಂದು ಕೂಡಾ ಕರೆಯುತ್ತಾರೆ ಎಂದರೆ ಸರಿ.

ನಾವು ಮತ್ತು ಪ್ರತಿವಾದಿಗಳು ಒಟ್ಟು ಕುಟುಬಂದ ಆಸ್ತಿಗಳನ್ನು ವಿಭಾಗ ಮಾಡಿಕೊಳ್ಳುವ ಪೂರ್ವದಲ್ಲಿ ಮತ್ತು ನಂತರ ಗಜೇಂದ್ರಗಡದಲ್ಲಿರುವ ಮಳಿಗೆಯ ಖಾತೆಯು ಪ್ರತಿವಾದಿಗಳ ತಂದೆ ಕರಿಬಸಪ್ಪರವರ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ.

ಸಾಕ್ಷಿ ಮುಂದುವರೆದು ಮೊದಲು ನಮ್ಮ ತಂದೆಹೆಸರಿನಲ್ಲಿದ್ದು ನಂತರ ಪ್ರತಿವಾದಿಯು ಕಾನೂನು ಬಾಹೀರವಾಗಿ ಅವರ ಹೆಸರಿನಲ್ಲಿ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ನನ್ನ ತಂದೆಯವರು 1 ನೇವಾದಿಯ ಹೆಸರಿನಲ್ಲಿ 1991 ರಲ್ಲಿ ಮಾಡಿಸಿರುತ್ತಾರೆ ಎಂದರೆ ಸರಿ ಸಾಕ್ಷಿ ಮುಂದುವರೆದು ನಮ್ಮ ಕುಟುಬಂದ ಅವಶ್ಯಕತೆಗಳಿಗೆ ಮಾರಾಟ ಮಾಡುವ ಸಲುವಾಗಿ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು 1992 ರಲ್ಲಿ ಶ್ರೀಕಾಂತ ಎಂಬುವವರಿಗೆ ಮಾರಾಟ ಮಾಡಲಾಗಿದೆ ಎಂದರೆ ಸರಿ. ಸದರಿ ಆಸ್ತಿಯು ಗಜೇಂದ್ರಗಡದ ಮುಖ್ಯ ರಸ್ತೆಯಲ್ಲಿ ಬರುತ್ತದೆ ಎಂದರೆ ಸರಿ. ನಮ್ಮ ಪಾಲಿಗೆ ಬಂದ ಮೇಲ್ಕಂಡ ಆಸ್ತಿಯನ್ನು ಮಾರಾಟ ಮಾಡಿ ಪ್ರತಿವಾದಿಗಳ ತಂದೆಗೆ ವಿಭಾಗದಲ್ಲಿ ಬಂದ ಆಸ್ತಿ ಕುರಿತು ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

1987 ರಲ್ಲಿ ಪಾಲು ವಿಭಾಗದ ಪ್ರಕಾರ ಖಾತೆ ಮಾಡಿಸುತ್ತೇವೆಎಂದು ಪ್ರತಿವಾದಿಗಳ ತಂದೆ ಕರಿಬಸಪ್ಪರವರಿಂದ ಖಾಲಿ ಹಾಳೆ ಮೇಲೆ ನಾನು ಮತ್ತು ನನ್ನ ಚಿಕ್ಕಪ್ಪ ಸಹಿ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಕರಿಬಸಪ್ಪರವರಿಂದ ಖಾಲಿ ಹಾಳೆ ಮೇಲೆ ಸಹಿ ಪಡೆದ ದಾಖಲಾತಿಯ ಆಧಾರದ ಮೇಲೆ ಅವರ ಹೆಸರಿನಲ್ಲಿ ನಾನು ಮತ್ತು ನನ್ನ ಚಿಕ್ಕಪ್ಪ ದಾವೆ ಸಲ್ಲಿಸಿರುತ್ತೆವೆ ಎಂದರೆ ಸರಿಯಲ್ಲ. ಸದರಿ ದಾವೆಯ ಬಗ್ಗೆ ತಿಳಿದ ನಂತರ ಪ್ರತಿವಾದಿಗಳ ತಂದೆ ಅರ್ಜಿ ಸಲ್ಲಿಸಿ ಸದರಿ ಪ್ರಕರಣವನ್ನು ಹಿಂಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ನ್ಯಾಯಾಲಯದಹೊರಗೆ ರಾಜಿ ಸಂದಾನವಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ರಾಜಿ ಸಂಧಾನವು ಬಸವರಾಜಪ್ಪ ಸೇಳ್ಕಿ , ವೀರಪ್ಪ ಕುಂಬಳಾವತಿ , ಹೊಸಕೇರಿ ಬಸಪ್ಪ , ಗುಂಜಳ್ಳಿ ಶೇಖರಪ್ಪ , ಸದಾಶಿವಯ್ಯ ಹಿರೇಮಠ , ಶಿವಮೂರ್ತಯ್ಯ ಸರಗಣಾಚಾರ ರವರ ಸಮಕ್ಷಮ ಆಗಿರುತ್ತದೆ. ಆ ಸಮಯದಲ್ಲಿ

ನಾನು , ನನ್ನ ಸಹೋದರ ಹಾಗೂ ಕರಿಬಸಪ್ಪನ ಮಕ್ಕಳು ಇದ್ದರು. ರಾಜಿ ಸಂಧಾನಾ ಆದ ಕುರಿತು ಕಾಗದಲ್ಲಿ ಬರವಣಿಗೆ ಆಗಿರುವುದಿಲ್ಲ. ಈ ಕುರಿತು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ರಾಜಿ ಸಂಧಾನದಲ್ಲಿ ದಾವಾ ಸ್ವತ್ತು ನಮ್ಮ ಪಾಲಿಗೆ ಬಂದಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ರಾಜಿ ಸಂಧಾನದಲ್ಲಿ ದಾವಾ ಸ್ವತ್ತು ಮತ್ತು ಸರ್ವೆ ನಂ. 301/1 , 301/3 , 371 ಮತ್ತು ಹಳೆ ಮನೆ ಸಂ. 855 ಕರಿಬಸಪ್ಪ ರವರ ಭಾಗಕ್ಕೆ ಬಂದಿರುತ್ತವೆ ಎಂದರೆ ಸರಿಯಲ್ಲ. 1987 ರಲ್ಲಿ ಆದ ಪಾಲು ವಿಭಾಗದಂತೆ ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳತಂದೆಯು ಸ್ವಾಧೀನದಲ್ಲಿದ್ದು ನಂತರ ಪ್ರತಿವಾದಿಗಳು ಮಾಲೀಕರಾಗಿ ಸ್ವಾಧೀನ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಮಾಡುವ ಸಲುವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು, ಕುಷ್ಟಗಿ**